ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 664/2023

ಸಿ ಡಬ್ಲ್ಯೂ-1

ಪಿ ಡಬ್ಲ್ಯೂ-1

ದಿಃ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸಂದೀಪ ನಾಯಕ |
| ತಂದೆಯ ಹೆಸರುಃ | ಈಶ್ವರ ನಾಯಕ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ರೈತಾಬಿ |
| ವಿಳಾಸಃ | ಶಿರಗುಂಜಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ಮತ್ತು 3 ರವರ ಸ್ವಲ್ಪ ಪರಿಚಯ ಇರುತ್ತದೆ. ಚಾಸಾ-4 ನನ್ನ ಹೆಂಡತಿ. ಚಾಸಾ-5 ರಿಂದ 7 ನೆಯವರ ಪರಿಚಯವಿರುವುದಿಲ್ಲ. ನಮ್ಮ ಪಕ್ಕದ ಊರಿನವರು ಆಗಿರುತ್ತಾರೆ. 1 ರಿಂದ 3ನೇ ಆರೋಪಿತರು ಹಾಗೂ ಶೋಭಾ ನಾಯಕ, ಸನ್ನತ ಅಶೋಕ ನಾಯಕ ಇವರ ಪರಿಚಯವಿದ್ದು, ಅವರು ನನ್ನ ಚಿಕ್ಕಪ್ಪನ ಹೆಂಡತಿ ಮತ್ತು ಮಕ್ಕಳು. ದಿಃ25-06-2023 ರಂದು ಬೆಳಿಗ್ಗೆ 11 ಗಂಟೆಗೆ ನಾನು ಮತ್ತು ಚಾಸಾ-4 ಮತ್ತು ಚಾಸಾ-6 ನಮ್ಮ ಮನೆಯಲ್ಲಿ ಕುಳಿತುಕೊಂಡು ಮಾತನಾಡುತ್ತಿರುವಾಗ ನಮ್ಮ ದನಕರುಗಳು ಕೊಟ್ಟಿಗೆಗೆ ಬರುತ್ತವೆ. ನಮ್ಮ ದನಕರುಗಳು ಯಾವಾಗಲೂ ಸಂಜೆ 5 ಗಂಟೆಗೆ ಬರುತ್ತಿದ್ದವು. ಇಂದು ದನಕರುಗಳು ಯಾಕೆ ಮುಂಚೆಯೇ ಕೊಟ್ಟಿಗೆಗೆ ಬಂದಿರುತ್ತವೆ ಎಂದು ನೋಡುತ್ತೇನೆ ಎಂದು ಹೇಳಿ ಗದ್ದೆ ಕಡೆಗೆ ನಾನು ಹೋಗಿರುತ್ತೇನೆ.

ಶಿರಗುಂಜಿ ಗ್ರಾಮದ ಸರ್ವೆ ನಂ.71 ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿದ್ದು, ನಾನು ಅಲ್ಲಿಗೆ ಹೋದಾಗ ಅಲ್ಲಿ ನಮ್ಮ ದಾಯಾದಿಗಳಾದ ಆರೋಪಿತರು, ಸುಬ್ರಮಣ್ಯ ಗಣಪತಿ ನಾಯಕ, ಸನತ್ ಅಶೋಕ ನಾಯ್ಕ, ಶೋಭಾ ಅಶೋಕ ನಾಯಕ ಇವರು ನಮ್ಮ ಅಜ್ಜಿಗೆ ಪಾಲಿಗೆ ಬಂದ ಜಮೀನಿನಲ್ಲಿ ಬೇಲಿಯನ್ನು ಹಾಕುತ್ತಿದ್ದರು. ಸದರಿ ಜಾಗದ ವಿಷಯವಾಗಿ ನ್ಯಾಯಾಲಯದಲ್ಲಿ ವಿಚಾರಣೆಗೆ ಇರುತ್ತದೆ. ಅವರು ಬೇಲಿ ಹಾಕುವುದನ್ನು ನೋಡಿ, ನಾನು ನ್ಯಾಯಾಲಯದಲ್ಲಿ ಪ್ರಕರಣ ಮುಗಿದ ನಂತರ ಬೇಲಿ ಹಾಕಿ ಎಂದು ಹೇಳಿರುತ್ತೇನೆ. ಯಾವ ಯಾರ ಹಿಸ್ಸೆಗೆ ಜಾಗ ಬರುತ್ತದೆಯೋ ಅಲ್ಲಿ ಬೇಲಿ ಹಾಕಿಕೊಳ್ಳೋಣ ಎಂದು ಹೇಳಿರುತ್ತೇನೆ. ಆಗ 1ನೇ ಆರೋಪಿಯು ಕಬ್ಬಿಣದ ಪಾಳಿಯಿಂದ ನನ್ನ ತಲೆಗೆ ಹೊಡೆದಿರುತ್ತಾರೆ. ಮತ್ತು ಸುಬ್ರಮಣ್ಯ ಈತನು ಕುಟಾರಿಯಿಂದ ಎದೆಯ ಮೇಲೆ ಹೋಡೆದಿರುತ್ತಾನೆ. ಆಗ ನಾನು ಅಲ್ಲಿಯೇ ಕುಸಿದು ಬಿದ್ದಿರುತ್ತೇನೆ. ಸನತ್ ಅಶೋಕ ನಾಯಕ ಹಾಗೂ 2ನೇ ಆರೋಪಿ ನನ್ನ ಕುತ್ತಿಗೆಯನ್ನು ಅಡಚಿದರು. 2ನೇ ಆರೋಪಿಯು ಬೇಲಿ ಹಾಕಲು ತಂದ ಕತ್ತಿಯಿಂದ ನನ್ನ ಕಾಲಿಗೆ ಚುಚ್ಚಿರುತ್ತಾನೆ. ಆಗ ನಾನು ಬೊಬ್ಬೆ ಹಾಕಿದೇನು. ಆಗ ನನ್ನ ಹೆಂಡತಿ ಮತ್ತು ಚಾಸಾ-6 ರವರು ಸದರಿ ಜಾಗಕ್ಕೆ ಓಡಿ ಬಂದಿರುತ್ತಾರೆ. ತಪ್ಪಿಸಲು ಬಂದಾಗ ಶೋಭಾ ಇವರು ನನ್ನ ಹೆಂಡತಿಯ ಕೂದಲನ್ನು ಎಳೆದು, 2 ನೇ ಆರೋಪಿ ಮತ್ತು ಸುಬ್ರಮಣ್ಯ ನನ್ನ ಹೆಂಡತಿಯನ್ನು ದೂಡಿ, ಅವಳು ಹಾಕಿದ ಬಟ್ಟೆಯನ್ನು ಹರಿದು ಬೀಳಿಸಿರುತ್ತಾರೆ. ಆಗ ಚಾಸಾ-6 ರವರು ಬಂದು ತಪ್ಪಿಸಿರುತ್ತಾರೆ. ಅವಾಚ್ಯ ಶಬ್ದಗಳಿಂದ ಆರೋಪಿತರು ಬೈದಿರುತ್ತಾರೆ. ನಂತರ ಚಾಸಾ-6 ರವರು ಇಲ್ಲಿಗೆ ಬರದೇ ಇದ್ದರೆ ನಿನ್ನ ಹೆಂಡತಿಯ

ಮಾನಭಂಗ ಮಾಡಿ ಇಲ್ಲಿಯೇ ಸಾಯಿಸೇ ಬಿಡುತ್ತಿದ್ದೇವು ಎಂದು ಹೇಳಿರುತ್ತಾರೆ. ಆಗ ಜನರು ಬಂದಿದ್ದು, ಆರೋಪಿತರು ಓಡಿ ಹೋಗಿರುತ್ತಾರೆ.

2. ನಂತರ ಮನೆಗೆ ಬಂದು ಠಾಣೆಗೆ ಜಗಳದ ಬಗ್ಗೆ ಹೇಳಲು ಕರೆ ಮಾಡಿರುತ್ತೇನೆ. ಆಗ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ, ನನ್ನ ಹೆಂಡತಿ ಮಾತನಾಡಿರುತ್ತಾಳೆ. ನಂತರ ಖಾಸಗಿ ವಾಹನದಲ್ಲಿ ತಾಲೂಕಾ ಆಸ್ಪತ್ರೆಗೆ ಬಂದಿರುತ್ತೇವೆ. ನಂತರ ನನ್ನ ಕಾಲಿಗೆ ಮತ್ತು ತಲೆಗೆ ಹೊಲಿಗೆ ಹಾಕಿರುತ್ತಾರೆ. ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅದೇ ದಿನ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇವೆ. ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1, ದೂರಿನ ಮೇಲಿರುವ ಸಾಕ್ಷಿಯು ಸಹಿಯನ್ನು ನಿಪಿ–1ಎ ಎಂದು ಗುರುತಿಸಲಾಯಿತು.

3. ಪೊಲೀಸರು ನಂತರ ನಮ್ಮನ್ನು ಕರೆದಿರುವುದಿಲ್ಲ. ನನ್ನ ಮರು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಪಾಳಿ, ಕತ್ತಿ ಮತ್ತು ಕುಟಾರಿ ನೋಡಿ ಗುರುಸಿದ್ದು, ಅವುಗಳನ್ನು ಮುಮಾ–1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ನೈಟಿಯನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಮರುಹೇಳಿಕೆಯ ವಿಚಾರವಾಗಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

4. ನೀವು ನಿಮ್ಮ ದೂರಿನಲ್ಲಿ ಶೋಭಾ ನಾಯಕ ಮತ್ತು ಸನತ್ ನಾಯಕ ಇವರು ನನಗೆ ಹಾಗೂ ನನ್ನ ಹೆಂಡತಿಗೆ ಹಲ್ಲೆ ಮಾಡಿದ್ದು ಎಂದು ಹೇಳಿದ್ದು, ದಿಃ 07-08-2023 ರಂದು ನಿಮ್ಮನ್ನು ಪೊಲೀಸ್ ಠಾಣೆಗೆ ಕರದಾಗ ನೀವು ಅವರಿಬ್ಬರೂ ನಮಗೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಎಂದು ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಲ್ಲೆ ಮಾಡಿದ ಸಂದರ್ಭದಲ್ಲಿ ಅಸ್ವಸ್ಥರಾಗಿದ್ದ ಕಾರಣ ಹಾಗೂ ಹಲ್ಲೆ ನಡೆದ ದಿನದಂದು ಗಡಿಬಿಡಿಗೊಂಡು ದೂರಿನಲ್ಲಿ ಅವರಿಬ್ಬರೂ ಸಹ ಹಲ್ಲೆ ಮಾಡಿರುತ್ತಾರೆ ಎಂದು ನಮೂದಿಸಿದ್ದು, ನಂತರ ತಿಳಿದಾಗ ಅವರು ಹಲ್ಲೆ ಮಾಡಿರುವುದಿಲ್ಲ ಎಂದು ತಿಳಿದು ಬಂದ ವಿಚಾರ ತಿಳಿದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮರುಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನೀವು ಮರುಹೇಳಿಕೆಯನ್ನು ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು 319 ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಸಮಯಾವಕಾಶ ಕೋರಿದ್ದು, ಆದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.